ದಿನಾಂಕ: 23.03.2026

ಅಸಲುದಾವೆ: 97/2020

ಡಿ.ಡಬ್ಲ್ಯೂ: 2

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ವಕೀಲರಿಂದ:

ನನ್ನ ಹೆಸರು ಕೆ.ಸಿ.ಪುಟ್ಟಸ್ವಾಮಿ. ನನ್ನ ಊರು ಗುರುದೇವರಹಳ್ಳಿ, ಹಾಲಿ ವಾಸ ಕೆ.ಎಂ.ದೊಡ್ಡಿ. ನಾನು 2006 ರಿಂದ ಕೆ.ಎಂ.ದೊಡ್ಡಿಯಲ್ಲಿ ವಾಸವಾಗಿದ್ದೇನೆ. ನಾನು ಮೊದಲು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ, ಈಗ ಸ್ವಂತ ಮನೆಯಲ್ಲಿ ವಾಸವಾಗಿದ್ದೇನೆ. ಸ್ವಂತ ಮನೆ ಕಟ್ಟಿ ಒಂದು ವರ್ಷ ಆಗಿರುತ್ತದೆ. ಈ ಕೇಸಿನ ನಂಬರ್ ನನಗೆ ಗೊತ್ತಿಲ್ಲ. ಈ ಕೇಸನ್ನು ಯಾರು ಹಾಕಿದ್ದಾರೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಲೋಹಿತ್ ಗೌಡ ಎಂದು ಉತ್ತರಿಸುತ್ತಾರೆ. ಲೋಹಿತ್ ಗೌಡ ಯಾರ ಮಗ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಕೆ.ಟಿ.ಪುನಿತ್ ಗೌಡರವರ ಮಗ ಎಂದು ಉತ್ತರಿಸುತ್ತಾರೆ. ಈ ಕೇಸನ್ನು ಯಾರ ಯಾರ ವಿರುದ್ಧ ಹಾಕಿದ್ದಾರೆ ಗೊತ್ತಾ ಎಂದರೆ ಸಾಕ್ಷಿ ತಿಮ್ಮೇಗೌಡ, ಪುಟ್ಟಸ್ವಾಮಿ ಮತುತ ಭಾಗ್ಯ ಎಂದು ಉತ್ತರಿಸುತ್ತಾರೆ.

2. ನಾನು ಏಳನೀರು ವ್ಯಾಪಾರ ಮಾಡುತ್ತೇನೆ ಜೊತೆಗೆ ಚಾಟ್ಸ್ ಅಂಗಡಿ ನಡೆಸುತ್ತಿದ್ದೇನೆ. ನಮ್ಮ ತಂದೆಯ ಹೆಸರಿನಲ್ಲಿ ಕೃಷಿ ಭೂಮಿ ಇದೆ ವ್ಯವಸಾಯವನ್ನು ಮಾಡುತ್ತೇನೆ. ನಮಗೆ 20 ಗುಂಟೆ ಕೃಷಿ ಇರುತ್ತದೆ. ಸದರಿ 20 ಗುಂಟೆ ಜಮೀನಿನಲ್ಲಿ ಕಬ್ಬು ಬೆಳೆ ಬೆಳೆಯುತ್ತೇವೆ. ಸದರಿ ಜಮೀನಿನಲ್ಲಿ ಕಬ್ಬು ಬೆಳೆಯುತ್ತೇವೆ, ಅದರಿಂದ ಸುಮಾರು 75 ಸಾವಿರ ಆದಾಯ ಬರಬಹುದು. ಏಳನೀರು ವ್ಯಾಪಾರ ಮತ್ತು ಚಾಟ್ಸ್ ವ್ಯಾಪಾರದಿಂದ ವರ್ಷಕ್ಕೆ ಸುಮಾರು 5-6 ಲಕ್ಷ ಆದಾಯ ಬರಬಹುದು. ನಾನು ಐ.ಟಿ ರಿಟರ್ನ್ಸ್ ಸಲ್ಲಿಸುತ್ತಿದ್ದೇನೆ. ಪ್ರಮಾಣ ಪತ್ರವನ್ನು ಟೈಪ್ ಮಾಡಿದವರು ಯಾರು ಎಂದರೆ ಸಾಕ್ಷಿ ನಾನೇ ಮಾಡಿಸಿದ್ದೇನೆ, ಎಲ್ಲಿ ಮಾಡಿಸಿದ್ದೀರಿ ಎಂದರೆ ಸಾಕ್ಷಿ ಮದ್ದೂರಿನಲ್ಲಿ ಎಂದು ಉತ್ತರಿಸುತ್ತಾರೆ. ಮದ್ದೂರಿನಲ್ಲಿ ಎಲ್ಲಿ ಮಾಡಿಸಿದ್ದೀರಿ ಎಂದರೆ ಸಾಕ್ಷಿ ಲಾಯರ್ ಆಫೀಸಿನಲ್ಲಿ ಎಂದು ಉತ್ತರಿಸುತ್ತಾರೆ. ಪ್ರಮಾಣ ಪತ್ರವನ್ನು ನೀವು ಹೇಳಿ ಮಾಡಿಸಿಲ್ಲ ಎಂದರೆ ಸಾಕ್ಷಿ ನೀವು ಹೇಳುವುದು ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂಬುದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತು ಎಂದು

ಉತ್ತರಿಸುತ್ತಾರೆ. ವಾದಿ ಲೋಹಿತ್ ಗೌಡ ಅವರು ನಿಮಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿ ಅವರ ಕುಟುಂಬವೇ ನನಗೆ 20 ವರ್ಷಗಳಿಂದ ಪರಿಚಯ ಎಂದು ಉತ್ತರಿಸುತ್ತಾರೆ. ವಾದಿ ಲೋಹಿತ್ ಅವರಿಗೆ ಎಷ್ಟು ವರ್ಷ ಎಂದು ಹೇಳಬಹುದಾ ಎಂದರೆ ಸಾಕ್ಷಿ ಸುಮಾರು 10 ವರ್ಷ ವಯಸ್ಸಾಗಿದೆ ಎಂದು ಉತ್ತರಿಸುತ್ತಾರೆ. ವಾದಿ ಲೋಹಿತ್ ಗೌಡ ಅವರು ಅವರ ತಾಯಿಯ ಜೊತೆಯಲ್ಲಿ ವಾಸವಾಗಿದ್ದಾರೆ. ವಾದಿ ಲೋಹಿತ್ ಗೌಡ ಅವರು ಎಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಪುಟ್ಟಸ್ವಾಮಿಯವರು ನಿಮ್ಮ ಸ್ನೇಹಿತರು ಎಂದರೆ ಸಾಕ್ಷಿ ಅವರ ಕುಟುಂಬವೇ ನನಗೆ ಪರಿಚಯ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಪುಟ್ಟಸ್ವಾಮಿಯವರು ಉಪನ್ಯಾಸಕರಾಗಿದ್ದಾರೆ. 2 ನೇ ಪ್ರತಿವಾದಿ ಪುಟ್ಟಸ್ವಾಮಿಯವರ ಹೆಂಡತಿ ಏಎನು ಕೆಲಸ ಮಾಡುತಾತರೆ ಎಂದರೆ ಸಾಕ್ಷಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾರೆ ಎಂದು ಉತ್ತರಿಸುತ್ತಾರೆ. ಅವರು ಪ್ರೌಢ ಶಾಲ ಶಿಕ್ಷಕಿಯಾಗಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಪುಟ್ಟಸ್ವಾಮಿಯವರು ಭಾರತಿ ಕಾಲೇಜಿನ ವಸತಿ ಗೃಹದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ವಾದಿಯ ತಂದೆ ಕೆ.ಟಿ.ಪುನಿತ್ ಅವರು ತೀರಿಕೊಳ್ಳುವವರೆಗು ಅವರ ತಂದೆ ತಾಯಿಯ ಜೊತೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಪುನಃ ಮುಂದದುವರಿದು ಎಲ್ಲರೂ ಒಟ್ಟು ಕುಟುಂಬದಲ್ಲಿಯೇ ಇದ್ದರು ಎಂದು ಹೇಳುತ್ತಾರೆ. ವಾದಿ ಲೋಹಿತ್ ಗೌಡ ಅವರ ತಾಯಿ ದಿವ್ಯರವರೂ ಸಹ ಕೆ.ಟಿ.ಪುನಿತ್ ಅವರ ಜೊತೆ ಅವರ ತಂದೆ ತಾಯಿ ಮನೆಯಲ್ಲಿಯೇ ವಾಸವಿದ್ದರು ಎಂದರೆ ಸಾಕ್ಷಿ ಸ್ವಲ್ಪ ದಿನ ಇದ್ದರು, ನಂತರ ಇರಲಿಲ್ಲ ಎಂದು ಉತ್ತರಿಸುತ್ತಾರೆ. ಪುನಿತ್ ಅವರು ತೀರಿಕೊಳ್ಳುವವರೆಗೂ ವಾದಿ ಮತ್ತು ಅವರ ತಾಯಿ ಅವರ ಜೊತೆಯಲ್ಲಿಯೇ ಅವರ ತಂದೆ ತಾಯಿ ಜೊತೆ ವಾಸವಾಗಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

3. ದಾವ ಸ್ವತ್ತುಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತವಾದ ಸ್ವತ್ತುಗಳು ಎಂದರೆ ಸರಿ. 1 ಮತ್ತು 3 ನೇ ಪ್ರತಿವಾದಿಗಳಿಗೆ 2 ನೇ ಪ್ರತಿವಾದಿ ಪುಟ್ಟಸ್ವಾಮಿಯವರನ್ನು ಕಂಡರೆ ಆಗುತ್ತಿರಲಿಲ್ಲ ಹಾಗಾಗಿ 2 ನೇ ಪ್ರತಿವಾದಿ ಪುಟ್ಟಸ್ವಾಮಿಯವರು ಭಾರತಿ ಕಾಲೇಜಿನ ವಸತಿ ಗೃಹದಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ವಾದಿ ತಂದೆ ತಾಯಿಯವರ ಮದುವೆ ಕೆಂಗಲ್ ಹನುಮಂತ ದೇವಸ್ಥಾನದಲ್ಲಿ ಆಗಿರುತ್ತದೆ. ಅವರು ಮದುವೆಗೆ ನಾನು ಹೋಗಿರುತ್ತೇನೆ.

ವಿವಾಹ ಆಮಂತ್ರಣ ಪತ್ರವನ್ನು ಕೊಟ್ಟು ನಿಮ್ಮನ್ನು ಕರೆದಿದ್ದರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಯಾರು ಕೊಟ್ಟಿದ್ದರು ಎಂದರೆ ಸಾಕ್ಷಿ ಅವರ ತಂದೆ ಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ವಾದಿ ತಂದೆ ತಾಯಿಯವರ ಮದುವೆಯನ್ನು ಪುನಿತ್ ಅವರು ಮತ್ತು 2 ನೇ ಪ್ರತಿವಾದಿಯವರು ನಿಂತು ನೆರವೇರಿಸಿಕೊಟ್ಟರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಮದುವೆಗೆ ಭಾರತಿ ಕಾಲೇಜಿನ ಉಪನ್ಯಾಸಕರೆಲ್ಲರು ಹಾಜರಾಗಿದ್ದರು ಎಂದರೆ ಸಾಕ್ಷಿ ಹೌದು, ಸ್ವಲ್ಪ ಜನ ಎಂದು ಉತ್ತರಿಸುತ್ತಾರೆ. ಮುಂದುವರಿದು, ಸರಳವಾಗಿ ಮದುವೆ ಆಗಿರುತ್ತದೆ ಎಂದು ಹೇಳುತ್ತಾರೆ. ಆ ಮದುವೆಗೆ ಭಾರತಿ ಕಾಲೇಜಿನ ಅಧ್ಯಕ್ಷರಾದು ಮಧು ಮಾದೇಗೌಡರವರೂ ಹಾಜರಾಗಿದ್ದರು ಎಂದರೆ ಸಾಕ್ಷಿ ಇಲ್ಲ, ನೆನಪಿಲ್ಲ, ನಾನಿದ್ದಾಗಾ ಹಾಜರಾಗಿರಲಿಲ್ಲ ಎಂದು ಉತ್ತರಿಸುತ್ತಾರೆ.

4. ಚಾಟ್ಸ್ ಅಂಗಡಿಯನ್ನು 2006 ರಿಂದ ಅಂದರೆ ಸುಮಾರು 20 ವರ್ಷಗಳಿಂದ ನಡೆಸುತ್ತಿದ್ದೇನೆ. ನಾನು Fruits, juice, chats ಅಂಗಡಿಯನ್ನು ಬಾಡಿಗೆ ಮಳಿಗೆಯಲ್ಲಿ ನಡೆಸುತ್ತಿದ್ದೇನೆ. ನಾನು ಅಂಗಡಿ ಮಳಿಗೆಗೆ ರೂ.3000-3500/- ಬಾಡಿಗೆ ಕೊಡುತ್ತಿದ್ದೇನೆ. ಸದರಿ ಅಗಂಡಿ ಮಳಿಗೆಗೆ ರೂ.50,000/- ಅಡ್ವಾನ್ಸ್ ಕೊಟ್ಟಿದ್ದೇನೆ. ದಾವ ಜಮೀನುಗಳು ಕೃಷಿ ಭೂಮಿಗಳಾಗಿದ್ದು, ಸದರಿ ಜಾಗಳದಲ್ಲಿ ವಾಣಿಜ್ಯ ಮಳಿಗೆಗಳು ಆಗಿವೆ ಎಂದರೆ ಸರಿ. ಸದರಿ ವಾದಿ ಮತ್ತು ಪ್ರತಿವಾದಿಗಳು ನಿಮಗೆ ಸುಮಾರು ವರ್ಷಗಳಿಂದ ಪರಿಚಯವಿರುದರಿಂದ ಲಕ್ಷಾಂತರ ಆದಾಯ ಬರುತ್ತದೆ ಬರುತ್ತಿದೆ ಎಂಬುದು ನಿಮಗೆ ಗೊತ್ತಿದೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

5. ದಿ.18.10.2017 ರಲ್ಲಿ ನಾನು ರೂ.2,50,000/-ಗಳನ್ನು ತಿಮ್ಮೇಗೌಡ ಮತ್ತು ಪುಟ್ಟಸ್ವಾಮಿಯವರಿಗೆ ಕೊಟ್ಟಿದ್ದೇನೆ. ದಿ.05.01.2018 ರಲ್ಲಿ ರೂ.1,25,000/-ಗಳನ್ನು ಕೊಟ್ಟಿದ್ದೇನೆ. ದಿ.19.01.2016 ರಲ್ಲಿ ರೂ.50,000/- ಕೊಟ್ಟಿದ್ದೇನೆ. ಅದಲ್ಲದೇ ಕೆ.ಟಿ.ಪುನಿತ್ ಅವರು ತೀರಿಕೊಂಡಾಗ ಕಾರ್ಯಕೊಸ್ಕರ ಒಂದು ಸಾರಿ ರೂ.35,000/- ಮತ್ತೊಂದು ಸಾರಿ ರೂ.40,000/-ಗಳನ್ನು ಕೊಟ್ಟಿದ್ದೇನೆ. ಮೇಲೆ ಹೇಳಿರುವ ರೀತಿ ಹಣ ಕೊಟ್ಟಿರುವುದಾಗಿ ಹೇಳಿದ್ದೀರಿ, ಚೆಕ್ ಮುಲಕ ಹಣ ಏನಾದರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಕೈ ಸಾಲ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಆ ರೀತಿ ಕೈ ಸಾಲ

ಕೊಟ್ಟಿರುವುದಕ್ಕೆ ಏನಾದರು ದಾಖಲಾತಿ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಕಷ್ಟದ ಪರಿಸ್ಥಿತಿಯಲ್ಲಿ ಇದ್ದುದ್ದರಿಂದ ದಾಖಲಾತಿ ತೆಗೆದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ಇಂತಿಂಥ ದಿನಾಂಕದಂದು ಇಷ್ಟಿಷ್ಟು ಮೊತ್ತ ಕೊಟ್ಟಿರುವುದಾಗಿ ನಿಖರವಾಗಿ ಹೇಳುತ್ತೀರಲ್ಲಾ ಆ ರೀತಿ ಎಲ್ಲಿಯಾದರು ಬರೆದಿಟ್ಟುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಬರೆದಿಟ್ಟುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಯಾವುದರಲ್ಲಿ ಬರೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಎಕ್ಸ್ ಸೈಸ್ ನಲ್ಲಿ ಎಂದು ಉತ್ತರಿಸುತ್ತಾರೆ. ಸದರಿ ಎಕ್ಸ್ ಸೈಸ್ ಅನ್ನು ನ್ಯಾಯಾಲಯದ ಮುಂದೆ ಹಾಜರು ಪಾಡಿಸಬಹುದಾ ಎಂದರೆ ಸಾಕ್ಷಿ ಹಾಜರು ಪಡಿಸಬಹುದು ಎಂದು ಉತ್ತರಿಸುತ್ತಾರೆ. ಒಂದೇ ನೋಟ್ ಬುಕ್ ಅಲ್ಲಿ ಬರೆದುಕೊಂಡಿದ್ದೀರಾ ಅಥವಾ ಹಲವು ನೋಟ್ ಬುಕ್ ಅಲ್ಲಿ ಬರೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಒಂದೇ ನೋಟ್ ಬುಕ್ ನಲ್ಲಿ ಬರೆದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಮುಂದಿನ ವಾಯಿದೆಯಲ್ಲಿ ಆ ನೋಟ್ ಬುಕ್ ಅನ್ನು ಹಾಜರು ಪಡಿಸಬಹುದಾ ಎಂದರೆ ಸಾಕ್ಷಿ ಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ.

**ಈ ಹಂತದಲ್ಲಿ ವಾದಿ ಪರ ವಕೀಲರು ಸದರಿ ದಾಖಲಾತಿ ಹಾಜರು ಪಡಿಸಿದ ಬಳಿಕ ಪಾಟೀ ಸವಾಲು ಮಾಡುವುದಾಗಿ ಸಮಯ ಕೇಳಿರುತ್ತಾರೆ, ಸದರಿಯವರ ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.